ಆದರೆ ನಾವು ಗಮನಿಸಿದಂತೆ, ತಮ್ಮಯ್ಯನೇ ಸಂದೇಶ ಕಳಿಸಿದ್ದು ಅದು ಪ್ರವೀಣನ ಮೊಬೈಲಿನಲ್ಲಿ ಇದೆ. ಆದರೆ ತಮ್ಮಯ್ಯನ ಮೊಬೈಲಿನಲ್ಲಿ ಇಲ್ಲ. ಯಾಕೆ? ಆತ ಉದ್ದೇಶಪೂರ್ವಕವಾಗಿ ಡಿಲೀಟ್ ಮಾಡಿರಬೇಕು! ಪ್ರವೀಣ ಮೆಸೇಜು ಕಳಿಸಲೇ ಇಲ್ಲವಾದ್ದರಿಂದ ಇಬ್ಬರ ಮೊಬೈಲಿನಲ್ಲಿಯೂ ಇಲ್ಲ! ಅಲ್ಲಿಗೆ ತಮ್ಮಯ್ಯ ಸುಳ್ಳು ಹೇಳಿದ್ದು ಸ್ಪಷ್ಟ.' ಹುರುಪಿನಿಂದ ವಾದಿಸಿದೆ. 'ಭೇಷ್ ಬಿದ್ದಪ್ಪ, ನಿನ್ನ ವಾದಸರಣಿ ಅದ್ಭುತ. ಆದರೂ ಸಾಕ್ಷಿಗಳು ಗಟ್ಟಿಯಾಗಿಲ್ಲ. ನಾವು ನಾಳೆ ಕೊಡವ ಸಮಾಜಕ್ಕೆ ಹೋಗಿ ಸಿಸಿಟಿವಿ ಫೂಟೇಜ್ ನೋಡೋಣ' ಮಾರ್ಮಿಕವಾಗಿ ಹೇಳಿ, ಮಲಗಲು ಸಿದ್ಧನಾದಂತೆ ಕರಮಚಂದ ಗಟ್ಟಿಯಾಗಿ ಆಕಳಿಸಿದ.

* * *

ಕೊಡವ ಸಮಾಜ ಕಟ್ಟಡದ ತಾರಸಿಯಲ್ಲಿದ್ದ ಸಿಸಿ ಕ್ಯಾಮೆರಾದ ದೃಷ್ಟಿಯ ವ್ಯಾಪ್ತಿ ನಮ್ಮ ಅರಿವಿಗೆ ಸಿಗಲಿಲ್ಲ. ಸೋಪಾನಗಳ ಸನಿಹವೇ ಎತ್ತರದಲ್ಲಿ ನೇತು ಹಾಕಿದ್ದ ಕ್ಯಾಮೆರಾದತ್ತ ಆಸ್ಥೆಯ ನೋಟ ಬೀರಿದ ಕರಮಚಂದ, ಸೆಕ್ಯುರಿಟಿಗೆ ಏಣಿ ತರಲು ಸೂಚಿಸಿದ. ಏಣಿ ಏರಿ, ಭೂತಗನ್ನಡಿ ಹಿಡಿದು, ಕ್ಯಾಮೆರಾ ಪರೀಕ್ಷಿಸಿದವನು ಮೊಗದಲ್ಲಿ ನಗು ಹರಿಸಿ, ಇಳಿದವನು ಕಟ್ಟಡದ ಮಾಲೀಕರ ಸಂಘದ ಕಚೇರಿಯತ್ತ ಹೆಜ್ಜೆ ಹಾಕಿದ.

ಅಲ್ಲಿದ್ದ ಸಿಬ್ಬಂದಿ ಸಿಸಿ ಕ್ಯಾಮೆರಾ ಸೆರೆಹಿಡಿವ ಚಿತ್ರಗಳನ್ನು ಗಣಕ ಯಂತ್ರದಲ್ಲಿ ತೋರಿದ. ಅತೀವ ಕುತೂಹಲದಲ್ಲಿ ನಿರುಕಿಸಿದವರಿಗೆ, ತಣ್ಣೀರು ಚಿಮುಕಿಸಿದಂತಾಯಿತು. ಕ್ಯಾಮೆರಾದ ದೃಷ್ಟಿ ತುಸು ಬಲಕ್ಕೆ ವಾಲಿದ್ದು, ಪ್ರವೀಣ ನಿಂತಿದ್ದ ಜಾಗ ಗೋಚರಿಸುತ್ತಿರಲಿಲ್ಲ! ಹಾಗಿದ್ದರೂ, ಪ್ರವೀಣ ಬಿದ್ದ ದಿನದ ಚಿತ್ರಗಳನ್ನು ತೋರಿಸಲು ಕರಮಚಂದ ಕೋರಿದಾಗ, ನನಗೆ ಸೋಜಿಗ. ಮಬ್ಬುಗತ್ತಲಿನ ದೃಶ್ಯಾವಳಿಯಲ್ಲಿ ಎಲ್ಲವೂ ಅಸ್ಪಷ್ಟ. ಕರಮಚಂದ ವಿಡಿಯೋವನ್ನು ಹಿಂದಕ್ಕೋಡಿಸಿದ.

'ಬಿದ್ದಪ್ಪ, ಇದು ಒಂದು ವಾರದ ಹಿಂದಿನ ದೃಶ್ಯ. ಪ್ರವೀಣ ನಿಂತಿದ್ದ ಜಾಗ ಸ್ಫುಟವಾಗಿ ಕಾಣುತ್ತಿದೆ! ಅಂದರೆ ಯಾರೋ ಕ್ಯಾಮೆರಾದ ದಿಕ್ಕು ಬದಲಿಸಿದ್ದಾರೆ! ಹೇಗೆ ಊಹಿಸಿದೆ ಗೊತ್ತೇ? ಈ ಕ್ಯಾಮೆರಾದ ಮುಖ ಮೆಟ್ಟಿಲುಗಳ ಕಡೆಗಿರಬೇಕಿತ್ತು. ಅದರ ಉದ್ದೇಶವೇ ಮೆಟ್ಟಿಲಿನಲ್ಲಿ ಆಗಮಿಸುವವರನ್ನು ಗಮನಿಸುವುದು.'

ವಿಡಿಯೋ ಮತ್ತೆ ಮುಂದೋಡಿತು ಟೋಪಿ ಹಾಕಿಕೊಂಡು, ಮುಖಕ್ಕೆ ಮಾಸ್ಕ್ ಧರಿಸಿದ ವ್ಯಕ್ತಿಯೊಬ್ಬ ಕ್ಯಾಮೆರಾದ ದಿಕ್ಕು ಬದಲಿಸುವುದು ಕಾಣಿಸಿತು. ಅದು ಪ್ರವೀಣನ ಸಾವಿನ ಎರಡು ದಿನಗಳ ಹಿಂದೆ! ಆದರೆ ಆತನ ಗುರುತು ಮಾತ್ರ ಸಿಗಲಿಲ್ಲ. ಸೆಕ್ಯುರಿಟಿಗೂ ಆತ ಬಂದದ್ದು ಗೊತ್ತಿರಲಿಲ್ಲ. ಅದರ ಫೂಟೇಜ್ ಪಡೆದುಕೊಂಡು ನಾವಲ್ಲಿಂದ ನಿರ್ಗಮಿಸುವಾಗ ನಾನು ಕೇಳಿದೆ, 'ಕ್ಯಾಮೆರಾದ ದಿಕ್ಕು ಬದಲಿಸಿದ ಉದ್ದೇಶ ಏನಿರಬಹುದು?'

'ಎರಡೇ ಸಾಧ್ಯತೆಗಳು. ಪ್ರವೀಣ ಮಾಡಿದ್ದರೆ, ಆತ್ಮಹತ್ಯೆ ಮಾಡಿಕೊಂಡರೂ, ಕೊಲೆ ಎಂದು ಪೊಲೀಸರು ಭಾವಿಸಬೇಕೆಂದು. ತಮ್ಮಯ್ಯ ಮಾಡಿಸಿದ್ದರೆ, ಕೊಲೆ ಮಾಡಿದರೂ ಆತ್ಮಹತ್ಯೆ ಎಂದು ಸಾಧಿಸಬಹುದೆಂದು. ಇವರೆಡರಲ್ಲಿ ಯಾವುದು ಸರಿ?' ಕರಮಚಂದನ ಹಣೆಯಲ್ಲಿ ನೆರಿಗೆಗಳು ಮೂಡಿದವು. ನಂತರ ನಾವು ಪ್ರವೀಣನ ಕಚೇರಿಯತ್ತ ಸಾಗಿದೆವು. ಕಚೇರಿಯಲ್ಲಿ ವಸಂತ ಮುತ್ತಪ್ಪನಿದ್ದುದು ನಮಗೆ ನೆರವಾಯಿತು. ಅಲ್ಲಿಯ ಸಿಬ್ಬಂದಿ ನಮಗೆ ಸಂಪೂರ್ಣ ಸಹಕಾರ ನೀಡಿದರು. ಕರಮಚಂದ ಸಂಸ್ಥೆಯ ಲೆಕ್ಕಪತ್ರಗಳಲ್ಲಿ, ಕಡತಗಳಲ್ಲಿ ತನ್ಮಯತೆಯಿಂದ ಅಧ್ಯಯನ ನಡೆಸಿದ. ನಾನೂ ಕಡತಗಳಲ್ಲಿ ಆಲಸ್ಯದಿಂದ ಕಣ್ಣಾಡಿಸಿದೆ. ಒಂದು ಫೈಲಿನೊಳಗಿದ್ದ ಪತ್ರ ಕಂಡು ನಾನು ದಂಗಾದೆ! 'ಕರಮಚಂದ, ಇಲ್ಲಿ ನೋಡು, ಪ್ರವೀಣನ ಡೆತ್ ನೋಟ್! ಆತ್ಮಹತ್ಯಾ ಪತ್ರ!' ತನ್ನ ಸಾವಿಗೆ ತಮ್ಮಯ್ಯನೇ ಕಾರಣವೆಂಬ ಘೋಷಣಾ ಪತ್ರ! ಅದರಲ್ಲಿ ಕೆಲವು ವರ್ತಕರ ಹೆಸರುಗಳು ಇದ್ದವು. ಅವರೆಲ್ಲರೂ, ತಾವು ಹಣವನ್ನು ತಮ್ಮಯ್ಯನಿಗೆ ಪಾವತಿಸಿದ್ದಾಗಿ ಹೇಳಿದ್ದು, ಒಟ್ಟಾರೆ ತಮ್ಮಯ್ಯ ತನಗೆ ಲಕ್ಷಾಂತರ ರೂಪಾಯಿ ವಂಚಿಸಿದ್ದು, ತನ್ನ ಸಾವಿಗೆ ತಮ್ಮಯ್ಯನೇ ಕಾರಣವೆಂದು ಪ್ರವೀಣ ಬರೆದಿದ್ದ. 'ಎಂತಹಾ ಹುಚ್ಚು ನಿರ್ಧಾರ ಮಾಡಿದ! ಹಣವನ್ನು ಹೇಗಾದರೂ ಮರಳಿ ಸಂಪಾದಿಸಬಹುದೆಂದು ಆತನಿಗೆ ಎಷ್ಟು ಸಲ ಹೇಳಿದ್ದೆ.' ಮುತ್ತಪ್ಪನ ಬೇಸರದ ನುಡಿಗಳು.

ಅದನ್ನು ಪೊಲೀಸರಿಗೆ ಒಪ್ಪಿಸುವಂತೆ ಕರಮಚಂದ ಮುತ್ತಪ್ಪನಿಗೆ ಸೂಚಿಸಿದ. ಈ ಪ್ರಕರಣದಲ್ಲಿ ಇನ್ನೇನೂ ಆಸಕ್ತಿ ಉಳಿದಿರಲಿಲ್ಲ. ಆ ಡೆತ್ ನೋಟಿನ ಆಧಾರದಲ್ಲಿ ತಮ್ಮಯ್ಯನನ್ನು ಜೈಲಿಗೆ ಕಳಿಸಬಹುದೇ